ನಾಟಾಗಳ ತಪಸೀಲ್.	ಕಡೂರು ಡಿಪೋ.			ಚಿಕ್ಕಮಗಳೂರು ಡಿಪೋ.			ಪರಾ.
	ಅದದು.	ಸಲೆ ಅಡಿ.	ಹರಾಜು ತಾರೀಖು.	ಅದದು.	ಸಲೆ ಅಡಿ.	ಹರಾಜು ತಾರೀಖು.	
ಸಾಗುವಾನಿ ನಾಟಾ ..	24	783	1896ನೇ ಇಸವಿ ಜೂ॥ 25ನೇ ತಾರೀಖು.	70	1,358	1896ನೇ ಇಸವಿ ಜೂ॥ 27ನೇ ತಾರೀಖು.	ಹೆಚ್ಚಿನ ಕಡಮೆ.
ರಿಜ್ವಾಡು ನಾಟಾ ..	65	1,850		11	345		
ಆ॥ ರಿಜ್ವಾಡು ನಾಟಾ ..	16	470		11	320		
ಸಾಗುವಾನಿ ಬೆಲಗು ..	367	1,113		1	12		
ಡಿಪೋ ತುಂಡುಗಳು ..	36	380		..	..		
ಕಾಡುಜಾತಿ ಬೆಲಗು ..	..	..		6	25		
ಸಾಗುವಾನಿ ತುದಿ ತುಂಡುಗಳು.	..	..		..	..		
ಕಿರಬಿದರು ..	1,000	..		1,200	..		
ಆಳಲೇಕಾಯಿ ..	..	..		145 ಮಣ	..		

ಹರಾಜು ಷರತ್ತು.—25—4—95ನೇ ಮತ್ತು 15ನೇ ನಂಬರ ಮೈಸೂರ ಗೆಜೆಟ್ಟುನಲ್ಲಿ ಛಾಪಿಸಿ ಆಗಿರುವ 15—3—95ನೇ 15229—155—92ನೇ ನಂಬರ ನೋಟಿಫಿಕೇಷನ್ ನೋಡತಕ್ಕದ್ದು. ಮತ್ತು ಸದರಿ ನೋಟಿಫಿಕೇಷನ್ ಹರಾಜು ಕಾಲದಲ್ಲಿ ಮೋದಲ್ಗೊಡಲಾಗುವದು.

ಬಿ. ಹೀರಾಕಿಂಗ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.

ಸದರ್ನ್ ಮರಾಟಾ ರೆಯಿಲ್ವೆ.
(ಮೈಸೂರು ಸ್ಟೇಟ್ ರೆಯಿಲ್ವೆ)
ನೋಟಿಸ್.

ನಂಜನಗೂಡು, ಮೈಸೂರು ಮತ್ತು ಪಶ್ಚಿಮ ವಾಹಿನೀ ರೆಯಿಲ್ವೆ ಸ್ಟೇಷನ್‌ಗಳಲ್ಲಿ ರೆಯಿಲ್ವೆಗೆ ಸಾಮಾನುಗಳನ್ನು ಭರ್ತೀ ಮಾಡುವ ಸ್ಥಳದಲ್ಲಿ ಬಿದ್ದಿರುವಂಥ ನಾಟಾಗಳ ವಾಲೀಕರಾದ ಯೆಲ್ಲರಿಗೂ ಈ ಮೂಲಕ ತಿಳಿಯಪಡಿಸುವದೇನಂದರೆ:—

ಸದರಿಯವರುಗಳು ತಾವೇ ಖುದ್ದಾಗಿಮತ್ತಾಗಲಿ ಅಥವಾ ಮುಖ್ತಾರೀಕರ ಮೂಲಕವಾಗಿ ಯಾಗಲಿ ಈ 96ನೇ ಇಸವಿ ಜೂ॥ 21ನೇ ತಾರೀಖಿನ ತರುವ್ವಾಯಿ ಆಯಾಯ ಸ್ಟೇಷನ್‌ಗಳಿಗೆ ಹಾಜರಾಗಿ, ತಮ್ಮ ತಮ್ಮ ನಾಟಾಗಳನ್ನು ಗುರ್ತಿಸಿ, ರೆಯಿಲ್ವೇ ಮುದ್ರಾಂಕ್ಷ ಅವುಗಳನ್ನು ಸಾಗಿಸಲಿಕ್ಕೆ ಪ್ರತಿ ಒಂದು ಭರ್ತೀ ವಾಗಿನಿಗೂ ಒಂದೊಂದು ಫಾರ್ವರ್ಡಿಂಗ್ ನೋಟಿನಂತೆ ಕೊಡಿಸಿ ಹೋದ ಪಕ್ಷದಲ್ಲಿ, ಮೇಲೆ ನಮೂದಿಸೋಣಾದ ತಾರೀಖು ಮತ್ತು ಆ ಅನಂತರದಲ್ಲಿ—ಸದರಿ ಭರ್ತೀ ಮಾಡುವ ಸ್ಥಳದಲ್ಲಿ ಬಿದ್ದಿವಂಥಾ ರವಾನೆ ಬಗ್ಗೆ ಬಿಪ್ಪಿಸಲ್ಪಡದೆ ಇರುವಂಥ ಎಲ್ಲಾ ನಾಟಾಗಳ ವಿಷಯದಲ್ಲಿಯೂ—ದರ ನಾಟಾ 1ಕ್ಕೆ ದರ ರೋಜು 1ಕ್ಕೆ 2 ಆಣೆಯಂತೆ ಸ್ಥಳ (ಬಾಡಿಗೆ ಯಾನೆ) ತೀರ್ವೆಯು ಚಾರ್ಜು ಮಾಡಲ್ಪಡುವದು.

ಎಲ್ಲಾ ಫಾರ್ವಡಿಂಗ್ ನೋಟುಗಳಲ್ಲಿಯೂ ನಾಟಾಗಳ ನಂಬರ ಮತ್ತು ಅವುಗಳನ್ನು ಗುರ್ತಿಸಬಹುದಾದಂಥಾ ಗುರ್ತುಗಳು ಸಹ ವಿವರಿಸಬೇಕು.

ಮೇಲೆ ನಮೂದಿಸಿರುವ ತಾರೀಖಿನ ಲಾಗಾಯತು ರೈಲ್ವೇ ನಿವೇಶನಗಳಲ್ಲಿ ಹಾಲೀ ಜಮಾಯಿಸಿರುವಂಥಾ ಆ ಅನಂತರದಲ್ಲಿ ಜಮಾಯಿಸುವಂಥ ಎಲ್ಲಾ ನಾಟಾಗಳ ಮೇಲೆಯೂ ಅವುಗಳನ್ನು ಮೇಲೆ ವಿಧಾಯಕ ಪಡಿಸಿರುವಂತೆ ರೈಲ್ವೇ ಮೂಲಕ ಟ್ರೈಯಲಿಕ್ಕೆ ಬಿಪ್ಪಿಸದೆ ಹೋದ ಪಕ್ಷದಲ್ಲಿ, ದರ ನಾಟಾ 1ಕ್ಕೆ ತಿಂಗಳು 1ಕ್ಕೆ ನಾಲ್ಕಾಣೆ ಮೇರೆ ಸ್ಥಳ (ಬಾಡಿಗೆ ಯಾನೆ) ತೀರ್ವೆಯು ಚಾರ್ಜು ಮಾಡಲ್ಪಡುತ್ತೆಂಬದನ್ನು ಸಹ ತಿಳಿಸಲ್ಪಟ್ಟಿದೆ.

ಬೆಂಗಳೂರು ಸಿಟಿ,
ತಾರೀಖು 30ನೇ ಮೇ 1896.

ಟಿ. ಜೆ. ಮಕ್ಲೊಯ್ಡ್,
ಡಿಸ್ಟ್ರಿಕ್ಟ್ ಟ್ರಾಫಿಕ್ ಸೂಪರಿಂಟೆಂಡೆಂಟ್.